ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಕೃಷ್ಣತುಂಗ ಆವರಣ, ಮಂತ್ರಾಲಯ ರಸ್ತೆ, ರಾಷ್ಟ್ರೀಯ ಹೆದ್ದಾರಿ–167, ಯರಗೇರಾ – 584 133, ರಾಯಚೂರು, ಕರ್ನಾಟಕ

**ಕಾಲೇಜು ಅಭಿವೃದ್ಧಿ ಮಂಡಳಿ**

ಕ್ರ.ಸ.:ರಾವಿರಾ/ಸಿಡಿಸಿ/2023-24/ 113 ದಿನಾಂಕ : 17/1/2024

## ಸುತ್ತೋಲೆ

ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ತಿಳಿಸುವುದೇನೆಂದರೆ 2021-22, 2022-23 ಮತ್ತು 2023-24ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪೂರ್ಣಗೊಂಡಿದೆ. ಅದಕ್ಕೆ ಸಂಬಂಧಿಸಿದಂತೆ **ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್ಇ 2021, ಬೆಂಗಳೂರು ದಿನಾಂಕ 12.02.2021 ರಂತೆ**

**ಕ್ರ.ಸಂ 7 : "ಈ ಹಿಂದಿನ ವರ್ಷಗಳಲ್ಲಿ ಸಂಯೋಜನೆಯಾಗಿರುವ ಕಾಲೇಜುಗಳು, ಪ್ರಸಕ್ತ ಸಾಲಿನಲ್ಲಿ Defined Parameters ನ 8 ಅಂಶಗಳನ್ನು ಪೂರ್ಣಗೊಳಿಸದೆ ಇದ್ದರೆ, ಮುಂದಿನ 2 ವರ್ಷಗಳಲ್ಲಿ Defined Parameters ಗಳನ್ನು ಪೂರ್ಣಗೊಳಿಸುವ ನಿಬಂಧನೆಗೆ ಒಳಪಡಿಸಿ ಸಂಯೋಜನೆಯನ್ನು ನೀಡಬಹುದು ಹಾಗೂ ಸದರಿ ಕಾಲೇಜುಗಳಿಗೆ ಯಾವುದೇ ಹೊಸ ಕೋರ್ಸ್/ಕಾಂಬಿಬೇಷನ್ ಅನ್ನು ನೀಡತಕ್ಕದ್ದಲ್ಲ".**

**ಕ್ರ.ಸಂ 8: "ಸಂಯೋಜನೆ ಪಡೆದ ಕಾಲೇಜುಗಳು ಎರಡು ವರ್ಷದ ನಂತರ ಕನಿಷ್ಠ 40 ಸಂಯೋಜನಾ ಅಂಕಗಳನ್ನು ಗಳಿಸದಿದ್ದಲ್ಲಿ ಮತ್ತು ಭೂಮಿಯೂ ಸೇರಿದಂತೆ Defined Parameters ಗಳನ್ನು ಪೂರ್ಣಗೊಳಿಸದ ಪಕ್ಷದಲ್ಲಿ ಪ್ರಥಮ ವರ್ಷದ ಪದವಿಗಳಿಗೆ ಪ್ರವೇಶಾತಿಯನ್ನು ನಿಷಿದ್ಧಗೊಳಿಸುವುದು. ಅಂತಹ ಸಂದರ್ಭಗಳಲ್ಲಿ ದ್ವಿತೀಯ ಮತ್ತು ತೃತೀಯ ಪದವಿ ವಿದ್ಯಾರ್ಥಿಗಳು, ತಮ್ಮ ಅಂತಿಮ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಆ ಕಾಲೇಜುಗಳನ್ನು ನಡೆಸಲು ಅವಕಾಶ ಕಲ್ಪಿಸುವುದು. ನಂತರ ಆ ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸುವುದು" (ಪ್ರತಿ ಲಗತ್ತಿಸಿದೆ ಕ್ರ,ಸಂ 7 & 8).**

ಮುಂದುವರೆದು, ಕಾಲೇಜುಗಳು ಅವಶ್ಯಕ ವ್ಯವಸ್ಥೆಗಳನ್ನು ಈ ಕೂಡಲೇ ಮಾಡಿಕೊಳ್ಳಲು ಸೂಚಿಸಲಾಗಿದೆ ಇಲ್ಲವಾದಲ್ಲಿ ಈ ಮೇಲ್ಕಾಣಿಸಿದ ಆದೇಶದಂತೆ ವಿಶ್ವವಿದ್ಯಾಲಯವು ಸೂಕ್ತ ಕ್ರಮ ಜರುಗಿಸಲಾಗುವುದು.

17/1/24

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ ರಾಯಚೂರು

ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ
ರಾಯಚೂರು

ಪ್ರತಿಗಳು :

1. ಪ್ರಾಚಾರ್ಯರು, ಸಂಯೋಜಿತ ಮಹಾವಿದ್ಯಾಲಯಗಳು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.
2. ಕುಲಪತಿಗಳ/ಕುಲಸಚಿವರ ಆಪ್ತ ಕಾರ್ಯದರ್ಶಿಗಳು, ರಾಯಚೂರು ವಿಶ್ವವಿದ್ಯಾಲಯ ರಾಯಚೂರು.
3. ಕಛೇರಿ ಪ್ರತಿ.